# ಮಂಗಳಂ ಮಂಗಳಂ ಮುಖ್ಯಪ್ರಾಣ ರಾಯಗೆ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Note:** Singer has followed these lyrics.

ರಾಗ: ಹಿಂದೂಸ್ತಾನಿ ಕಾಪಿ ತಾಳ: ಆದಿ

ಮಂಗಳಂ ಮಂಗಳಂ ಮುಖ್ಯಪ್ರಾಣ ರಾಯಗೆ || ಪ ||
ಮಂಗಳಂ ಮಂಗಳಂ ಕವಿಜನಗೇಯಗೆ || ಅಪ ||

ಪದುಮ ಮಿತ್ರ ಪುತ್ರಗೆ ರಾಜ್ಯವ ಸಾಧಿಸಿ ಕೊಟ್ಟವಗೆ
ಮುದದಿಂದ ವಾರಿಧಿಯ ಲಂಘಿಸಿ ಲಂಕೆಯ ಸುಟ್ಟವಗೆ
ಪದುಮಾಕ್ಷಿ ಜಾನಕಿಯ ನೋಡುತ ಮೋದವ ಪಟ್ಟವಗೆ
ಹದುಳದಿ ರಘುನಾಥನ ಪದದಲಿ ಶಿರವನಿಟ್ಟವಗೆ || 1 ||

ಪುಂಡರೀಕನ ನಯನ ಸುಪ್ರಚಂಡ ಭೀಮಗೆ
ಪುಂಡರ ಶಿರಗಳ ರಣದಿ ಚೆಂಡನಾಡಿದವಗೆ
ಚಂಡಿಸಿ ಶಿವನ ವರಗಳನೆಲ್ಲ ಖಂಡಿಸಿದಾತಗೆ
ಶುಂಡಾಲ ಪುರದರಸನೆಂದು ಮಂಡಿಸಿ ಮೆರೆದಗೆ || 2 ||

ದುರುಳ ಮಾಯಾವಾದಿಗಳನು ಮರುಳು ಮಾಡಿದವಗೆ
ಮುರಳೀಧರನೆ ಪರನೆಂದಾಗ ಧರೆಗೆ ತೋರಿದಗೆ
ಶರಣಾಗತರನು ಪೊರೆವೆನೆಂದು ಬಿರುದು ಪೊತ್ತವಗೆ
ಧರೆಯೊಳು ಪುರಂದರ ವಿಠಲನ ನೆನೆಯುವ ಕರುಣಾಸಾಗರಗೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಕವಿಜನಗೇಯ** – ಕವಿಗಳು ಯಾರನ್ನು ಹಾಡಿ ಹೊಗಳುವರೋ ಅವನು.

**ಪದುಮ ಮಿತ್ರ ಪುತ್ರಗೆ** – ಪದ್ಮ ಮಿತ್ರನೆಂದರೆ ಸೂರ್ಯ; ಅವನ ವಂಶದಲ್ಲಿ ಬಂದವನು ರಾಮ.

**ಹದುಳದಿ** – ಸ್ಥಿರವಾಗಿ, ಕುಶಲವೆಂಬ ನೆಮ್ಮದಿಯಿಂದ.

**ಪುಂಡರೀಕನ ನಯನ** – ತಾವರೆ ಹೂಗಳಂತೆ ಚೆಲುವಾದ ಕಣ್ಣುಳ್ಳ.

**ಚಂಡಿಸಿ...** – ಸಂದರ್ಭ ತಿಳಿಯುವುದಿಲ್ಲ.

**ಶುಂಡಾಲಪುರ** – ಹಸ್ತಿನಾವತಿ (ಶುಂಡಾಲ–ಆನೆಯ ಸೊಂಡಿಲು, ಹಸ್ತಿ ಎನ್ನುವುದಕ್ಕೆ ಪರ್ಯಾಯ).

**ಮುರಳೀಧರನೆ ಪರನೆಂದು** – ಹರಿಯು ಸರ್ವೋತ್ತಮನೆಂದು.

**Classification:** Keerthane
**Ankita:** purandara vittala
**Location:** NA
**Category:** Hanuma Stuti, madhwacharya Stuti, mangala song
**Sub-Category:** hanuma, rama, mangala, jana, mitra, Samudra, lanka, sita, bhima, hanuma-bhima-madhva, madhva, madhwacharya, shiva, vara, Krishna, bhumi, hari sarvottama, karuna, surya,
**Pravachana:** NA
**Explanation:** NA